## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MISC** 24/2025 **PW** –1

**ದಿಃ 16.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ಮತ್ತು 6 ನೇ ಎದುರುದಾರ ಪರ ವಕೀಲರಾದ ಶ್ರೀ ಪಿ ಕೆ ಜೆ ರವರಿಂದ.**

ನಾನು 2022 ರಲ್ಲಿ ಅಸಲು ದಾವಾ ನಂಬರ 497/2022 ನ್ನು ದಾಖಲಿಸಿದೇನು. ನಾನು ಕಂಪನಿಯ ಎಂ.ಡಿ ಆಗಿ ದಾಖಲಿಸಿದ್ದೇನು. ಪ್ರತಿ ಮುದ್ದತ್ತಿಗೂ ನಾನು ನಮ್ಮ ವಕೀಲರ ಮುಖಾಂತರ ನ್ಯಾಯಾಲಯದ ಕಾರ್ಯಕಲಾಪಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದೆ ಎಂದರೆ ಸರಿ. ಸದರಿ ಅಸಲು ದಾವಾ ನಂಬರ 497/2022 ದಲ್ಲಿ ನನ್ನ ವಿಚಾರಣೆ ದಿಃ31-05-2024 ಕ್ಕೆ ಭಾಗಶಃ ಪೂರ್ಣವಾಗಿತ್ತು ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ನ್ಯಾಯಾಲಯದವರು ನನಗೆ ಸಾಕಷ್ಟು ಅವಕಾಶಗಳನ್ನು ಕೊಟ್ಟರು ನಾನು ವಿಚಾರಣೆ ಮಾಡಿಸಲಿಲ್ಲ ಎಂದರೆ ಸರಿಯಲ್ಲ. ದಿಃ31-05-2024 ಕ್ಕೆ ಭಾಗಶಃ ವಿಚಾರಣೆ ಮುಗಿದಿದ್ದರು ನಾನು ಇನ್ನುಳಿದ ವಿಚಾರಣೆಯನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಬರದೆ ಮಾಡಿಸಲಿಲ್ಲ ಎಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಕಾಲಹರಣ ಮಾಡುತ್ತಾ ಸಾಕ್ಷಿ ಮಾಡಿಸಿಲ್ಲ ಎಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ನಾನು ಸುಳ್ಳು ದಾವೆಯನ್ನು ದಾಖಲಿಸಿದ್ದ ಕಾರಣ ನಾನು ಕಾಲಾಹರಣ ಮಾಡಿದೆ ಎಂದರೆ ಸರಿಯಲ್ಲ. ಹೀಗಾಗಿ ನ್ಯಾಯಾಲಯವು ದಿಃ15-03-2025 ರಂದು ನಾನಾಗಲಿ ನಮ್ಮ ವಕೀಲರಾಗಲಿ ಹಾಜರಿಲ್ಲದ ಕಾರಣ ಸದರಿ ದಾವಾ Non prosecution dismiss ಆಗಿದೆ ಎಂದರೆ ಸಾಕ್ಷಿ Non appearance ನಿಂದ dismiss ಆಗಿದೆ ಎನ್ನುತ್ತಾರೆ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ನಾನು ಬರಲಿಲ್ಲ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ಪಾಟೀ ಸವಾಲುಃ 1 ರಿಂದ 3 ನೇ ಎದುರುದಾರ ಪರ ಸದರಿ ವಕೀಲರು ಪ್ರತಿವಾದಿ 5 ಮತ್ತು 6 ರವರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿದ್ದು ಅವರ ಮನವಿಯನ್ನು ಪುರಸ್ಕರಿಸಿ ಸದರಿ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.)**

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ